ಅ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿಗೆ ಬಂದ ಹಣ

491(555) - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು?

ಆ) ಈ ಹಣವನ್ನು ಪೂರ್ತಿ ವಿನಿಯೋಗಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಈಗ ವಿನಿಯೋಗಿಸಿರುವ ಹಣವೆಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 2001-2002ನೇ ಸಾಲಿಗೆ ರೂ. 537.99 ಕೋಟಿ ಅನುದಾನ ಸ್ವೀಕೃತವಾಗಿದೆ.

ಆ) ಇಲ್ಲ.

ಇ) 2001-2002 ನೇ ಸಾಲಿನಲ್ಲಿ ವಿನಿಯೋಗಿಸಿದ ಹಣ ರೂ. 484.89 ಕೋಟಿ (ಕೇಂದ್ರದ ಪಾಲು)

ರಾಜ್ಯದಲ್ಲಿ ಮೂತ್ರಪಿಂಡ ಮಾರಾಟ

492(556) -ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೂತ್ರಪಿಂಡ ದಾನಿಗಳಿಗೆ ಅನುಮತಿ ನೀಡಲು ಸಮಿತಿಯನ್ನು ರಚಿಸಲಾಗಿದೆಯೇ?

ಆ) 2001-2002 ನೇ ಸಾಲಿನಲ್ಲಿ ಹಾಗೂ 2002-2003ನೇ ಸಾಲಿನಲ್ಲಿ ಇಲ್ಲಿಯವರೆಗೆ ಈ ಸಮಿತಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿದೆ;

ಇ) ಎಷ್ಟು ಮಂದಿಗೆ ಮೂತ್ರಪಿಂಡ ದಾನಕ್ಕೆ ಅನುಮತಿ ನೀಡಿದೆ;

ಈ) ಸರ್ಕಾರದ ಸಮಿತಿಯ ಅನುಮತಿ ಪಡೆಯದೆ ಮೂತ್ರಪಿಂಡ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ದಾನಿಗಳ ಸುಳ್ಳು ವಿಳಾಸ ನೀಡಿ ಅನುಮತಿ ಪಡೆದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಮೂತ್ರಪಿಂಡ ಮಾರಾಟದಲ್ಲಿ ಆಗುತ್ತಿರುವ ಅಕ್ರಮಗಳನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ಹೌದು.

ಆ) 198.

ಇ) 167

ಈ) ಅಧಿಕಾರಯುತ ಸಮಿತಿಯು ಮೂತ್ರಪಿಂಡ ಕಸಿ ಮಾಡುವ ಬಗ್ಗೆ ಮೂತ್ರ ಅನುಮತಿ ನೀಡುತ್ತದೆ. ಮಾರಾಟದ ಬಗ್ಗೆ ಬೆಂಗಳೂರು ಮತ್ತು ಮಂಡ್ಯದಲ್ಲಿ ಆಗಿರುವ ಎರಡು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಬಂದಿದೆ.

ಊ) ಅಥರೈಜೇಷನ್ ಸಮಿತಿಯಲ್ಲಿ ಕಾರ್ಯದರ್ಶಿಗಳು, ಕಾನೂನು ಇಲಾಖೆ ಕರ್ನಾಟಕ ಸರ್ಕಾರ ಇವರು ಅಧ್ಯಕ್ಷರಾಗಿರುತ್ತಾರೆ. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಮೂತ್ರ ಶಾಸ್ತ್ರ ವಿಭಾಗ, ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಮತ್ತು ಪೋಲೀಸ್ ಆಯುಕ್ತರು ಅಥವಾ ಅವರಿಂದ ನಾಮ ನಿರ್ದೇಶಿತನಾದ ಉಪ ಆರಕ್ಷಕ ಆಯುಕ್ತರ ಹುದ್ದೆಗೆ ಕಡಿಮೆ ಇಲ್ಲದ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ಇವರು ಪರವಾನಿಗೆ ನೀಡಬೇಕಾದರೆ ಅರ್ಜಿಗಳನ್ನು ಪರಿಶೀಲಿಸಿ ದಾನ ಮಾಡುವವರನ್ನು ಮತ್ತು ಪಡೆಯುವವರನ್ನು ಸಂದರ್ಶಿಸಿ ಅರ್ಹತೆ ಇದ್ದರೆ ಮಾತ್ರ ಅನುಮತಿ ನೀಡುತ್ತಾರೆ.

ಕರ್ನಾಟಕ ಸರ್ಕಾರವು ಮಾನವ ಅಂಗಾಂಗ ಕಸಿ ಕಾಯಿದೆ 1994 ಕಾಲಂ 22ರ ಪ್ರಕಾರ ಅಪ್ರಾಪ್ರಿಯೇಟ್ ಪ್ರಾಧಿಕಾರವನ್ನು ರಚಿಸಿದ್ದು ಅವರು ರಾಜ್ಯದ ಉಪ ಆಯುಕ್ತರು: ಸಹಾಯಕ ಆಯುಕ್ತರು ಪೊಲೀಸ್ ಇವರಿಗೆ ಜನರಿಂದ ಕಿಡ್ನಿ ಬಗ್ಗೆ ದೂರು ಬಂದಲ್ಲಿ ತನಿಖೆ ನಡೆಸಲು ಮತ್ತು ಅವರ ವ್ಯಾಪ್ತಿಯಲ್ಲಿ ಬರುವ ನ್ಯಾಯಾಲಯಕ್ಕೆ ಪ್ರಕರಣ ದಾಖಲು ಮಾಡಲು ಅಧಿಸೂಚನೆಯನ್ನು ನೀಡಿರುತ್ತಾರೆ.

ಹಳ್ಳಿಗಳಲ್ಲಿ ಶೌಚಾಲಯಗಳನ್ನು ಕಟ್ಟಲು ಹೆಚ್ಚಿನ ಸಹಾಯಧನ ಒದಗಿಸುವುದು

494(856) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಳ್ಳಿಗಳಲ್ಲಿ ಶೌಚಾಲಯಗಳನ್ನು ಕಟ್ಟಲು ಒಂದು ಶೌಚಾಲಯಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು; ಈ ಬಿಡುಗಡೆ ಮಾಡುವ ಹಣ ಅತೀ ಕಡಿಮೆಯೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಹಣವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;